ತಿಳಿದಿರುವುದೇ?

ಆ. ಈ ಪ್ರದೇಶದಲ್ಲಿ ಹಾಲಿ ಎಷ್ಟು ಎಕರೆಯ ಗಣಿ ಇದೆ?

ಇ. ಸರ್ಕಾರ ಹರಾಜು ಮುಖಾಂತರ ಈ ಗಣಿಯನ್ನು ಕೊಡಲು ಸಾಧ್ಯವೇ?

ಈ. ಈಗೇನಾದರೂ ಹರಾಜು ಮಾಡಲಾಗಿದೆಯೇ? ಅಥವಾ ಟೆಂಡರ್ ಕರೆಯಲಾಗಿದೆಯೇ?

ಉ. ಇದಕ್ಕಾಗಿ ಅರ್ಜಿಗಳನ್ನು ಸ್ವೀಕರಿಸಲಾಗಿದೆಯೇ? (ಹಾಗಿದ್ದಲ್ಲಿ, ಅರ್ಜಿದಾರರ ಪೂರ್ಣ ವಿವರ ನೀಡುವುದು)

ಊ. ಎಂ.ಎಂ.ಎಲ್. ಸಂಸ್ಥೆ ಇದರಲ್ಲಿ ಭಾಗವಹಿಸಿರುವುದೇ? ಮತ್ತು ಸರ್ಕಾರ ಯಾರಿಗಾದರೂ ಪರವಾನಗಿ ಕೊಟ್ಟಿರುವುದೇ? (ವಿವರ ಕೊಡುವುದು)

ಉತ್ತರ

ಅ. ಇಲ್ಲ.

ಆ. ಈ ಪ್ರದೇಶದಲ್ಲಿ ಹಾಲಿ 5-00 ಎಕರೆಗಳಿಗೆ ಕಲ್ಲು ಗಣಿ ಗುತ್ತಿಗೆ ಇರುತ್ತದೆ.

ಇ. ಹರಾಜು ಮಾಡಲು ಸಾಧ್ಯವಿರುವುದಿಲ್ಲ.

ಈ. ಇಲ್ಲ.

ಉ. ಇಲ್ಲ.

ಊ. ಹರಾಜು ಮಾಡದೇ ಇರುವುದರಿಂದ ಮೆ: ಮೈಸೂರು ಮಿನರಲ್ಸ್ ಸಂಸ್ಥೆಯವರು ಭಾಗವಹಿಸಿರುವುದಿಲ್ಲ. ಹಾಗೂ ಮೆ: ಪರಿಮಳ ಗ್ರಾನೈಟ್ಸ್‌ರವರಿಗೆ ಮಾನ್ಯ ಉಚ್ಚ ನ್ಯಾಯಾಲಯವು ಮೇಲ್ಮನವಿ ಸಂಖ್ಯೆ : 6879:99ರಲ್ಲಿ ಮಧ್ಯಂತರ ಆದೇಶ ನೀಡಿರುವುದರಿಂದ 5-00 ಎಕರೆ ಪ್ರದೇಶಕ್ಕೆ ಕಲ್ಲು ಗಣಿ ಗುತ್ತಿಗೆ ನೀಡಲಾಗಿದೆ.

ಹಾಸ್ಟೆಲ್ ನಿರ್ಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 416(642)

ಸದಸ್ಯರ ಹೆಸರು : ಶ್ರೀ ಲಕ್ಷ್ಮೀನಾರಾಯಣ ಎಂ.ಡಿ.(ಅಣ್ಣಯ್ಯ)(ತುರುವೇಕೆರೆ)

ಉತ್ತರಿಸುವ ಸಚಿವರು : ಶ್ರೀ ಕಾಗೋಡು ತಿಮ್ಮಪ್ಪ(ಸಮಾಜ ಕಲ್ಯಾಣ ಸಚಿವರು)

ಪ್ರಶ್ನೆ

1) ಬಾಣಸಂದ್ರ, ಬಾಲಹಳ್ಳಿ ಗೇಟ್ ಹಾಗೂ ಕೊಂಡಜ್ಜಿ ಕ್ರಾಸ್‌ನಲ್ಲಿ ಹಾಸ್ಟಲ್ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಈ ಭಾಗದ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ನಿಜವೇ?

3) ಹಾಗಿದ್ದಲ್ಲಿ, ಈ ಗ್ರಾಮಗಳಿಗೆ ಹಾಸ್ಟೆಲ್ ಸೌಲಭ್ಯಗಳನ್ನು ಎಂದಿನಿಂದ ಕಲ್ಪಿಸಲಾಗುವುದು?

4) ಈ ವರ್ಷದ ಆಯವ್ಯಯದಲ್ಲಿ ಈ ಕಾಮಗಾರಿಯನ್ನು ಸೇರಿಸಲಾಗುವುದೇ?

ಉತ್ತರ

1) ಇಲ್ಲ.

2) ಇಲ್ಲ.

3) ಉದ್ಭವಿಸುವುದಿಲ್ಲ.

4) ಉದ್ಭವಿಸುವುದಿಲ್ಲ.

ತುರುವೇಕೆರೆ ತಾಲ್ಲೂಕಿನ ಪಶು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 417(647)

ಸದಸ್ಯರ ಹೆಸರು : ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣ್ಣಯ್ಯ)(ತುರುವೇಕೆರೆ)

ಉತ್ತರಿಸುವ ಸಚಿವರು : ಶ್ರೀ ಎ.ಕೃಷ್ಣಪ್ಪ(ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಪ್ರಶ್ನೆ

ಅ) ತುರುವೇಕೆರೆ ತಾಲ್ಲೂಕು ಸಂಪಿಗೆ, ಮಾವಿನಕೆರೆ, ತಂಡಗ ಪಶು ವೈದ್ಯ